# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007
ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008

ಸಂಖ್ಯೆ:ದಾವಿ:ಶೈಕ್ಷಣಿಕ ವಿಭಾಗ/777/2025-26/1884 ದಿನಾಂಕ:31.07.2025

## :ಪರಿಷ್ಕೃತ ಪ್ರವೇಶ ಪ್ರಕಟಣೆ:

**ವಿಷಯ:** **ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು, ಪಿ.ಜಿ.ಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೆಟ್ ಕಾರ್ಯಕ್ರಮಗಳಿಗೆ 2025-26ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.**

**ಉಲ್ಲೇಖ:**
1. ವಿಶ್ವವಿದ್ಯಾನಿಲಯದ ಪ್ರವೇಶ ಪ್ರಕಟಣೆ ಪತ್ರದ ಸಂಖ್ಯೆ:ದಾವಿ /ಶೈಕ್ಷಣಿಕ/777/2025-26/1512, ದಿನಾಂಕ:14.07.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:31.07.2025

*******

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ, ಘಟಕ ಕಾಲೇಜು, ಸ್ವಾಯತ್ತ ಕಾಲೇಜುಗಳು, ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು, ಪಿ.ಜಿ., ಡಿಪ್ಲೋಮೊ, ಡಿಪ್ಲೋಮೊ ಮತ್ತು ಸರ್ಟಿಫಿಕೆಟ್ ಕಾರ್ಯಕ್ರಮಗಳಿಗೆ ಪರಿಷ್ಕೃತ ದಿನಾಂಕಗಳೊಂದಿಗೆ **2025-26ನೇ ಶೈಕ್ಷಣಿಕ** ಸಾಲಿನ **ಪ್ರವೇಶಾತಿಗಳಿಗೆ "ಆನ್‌ಲೈನ್"** ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**I. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿರುವ ಸ್ನಾತಕೋತ್ತರ ಕಾರ್ಯಕ್ರಮಗಳ ವಿವರ.**

| ಕ್ರ.ಸಂ. | ನಿಕಾಯ | ವ್ಯಾಸಂಗ ವಿಷಯಗಳು |
|---|---|---|
| 1 | **ಕಲಾ** | **ಎಂ.ಎ:** ಕನ್ನಡ, ಇಂಗ್ಲೀಷ್, ಮತ್ತು ಉರ್ದು<br>**ಎಂ.ಎ:** ಅರ್ಥಶಾಸ್ತ್ರ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ರಾಜ್ಯಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯು), ಮತ್ತು ಸಮಾಜಶಾಸ್ತ್ರ.<br>**ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್:** ಅಪ್ಲೈಡ್ ಆರ್ಟ್, ಮತ್ತು ಪೇಂಟಿಂಗ್ |
| 2 | **ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ** | **ಎಂ.ಕಾಂ.** |
| | | **ಎಂ.ಬಿ.ಎ.:** ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್<br>(ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ-ಪಿ.ಜಿ.ಸಿ.ಇ.ಟಿ. ಮುಖಾಂತರ) |
| 3 | **ಶಿಕ್ಷಣ** | ಎಂ.ಇಡಿ. ಮತ್ತು ಎಂ.ಪಿ.ಇಡಿ. |
| 4 | **ವಿಜ್ಞಾನ ಮತ್ತು ತಂತ್ರಜ್ಞಾನ** | **ಎಂ.ಎಸ್ಸಿ:** ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಪರಿಸರ ವಿಜ್ಞಾನ, ಫ್ಯಾಷನ್ ಡಿಸೈನ್, ಆಹಾರ ತಂತ್ರಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಜೀವಿಶಾಸ್ತ್ರ, ಭೌತಶಾಸ್ತ್ರ, ಯೋಗ ವಿಜ್ಞಾನ, ಮತ್ತು ಪ್ರಾಣಿಶಾಸ್ತ್ರ. |
| | | **ಎಂ.ಸಿ.ಎ.:** ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್<br>(ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ-ಪಿ.ಜಿ.ಸಿ.ಇ.ಟಿ. ಮುಖಾಂತರ) |
| 5 | **ಪಿ.ಜಿ. ಡಿಪ್ಲೋಮಾ/ ಡಿಪ್ಲೋಮಾ/ ಸರ್ಟಿಫಿಕೆಟ್ ಕಾರ್ಯಕ್ರಮಗಳು** | 1. ಪಿ.ಜಿ. ಡಿಪ್ಲೋಮಾ ಇನ್ ಸೈಬರ್ ಸೆಕ್ಯೂರಿಟಿ (ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಅಧ್ಯಯನ ವಿಭಾಗ)<br>2. ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಸಿಯಲ್ ಸರ್ವಿಸ್ (ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ)<br>3. ಪಿ.ಜಿ. ಡಿಪ್ಲೋಮ ಇನ್ ಡಾಟಾ ಅನಾಲಿಸಿಸ್ (ಅರ್ಥಶಾಸ್ತ್ರ ಅಧ್ಯಯನ ವಿಭಾಗ)<br>4. ಪಿ.ಜಿ. ಡಿಪ್ಲೋಮಾ ಇನ್ ಫುಡ್ ಪ್ರೊಸೆಸಿಂಗ್, ಸೇಫ್ಟಿ ಅಂಡ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ)<br>5. ಡಿಪ್ಲೋಮ ಇನ್ ಯೋಗ ವಿಜ್ಞಾನ (ಯೋಗ ವಿಜ್ಞಾನ ಅಧ್ಯಯನ ವಿಭಾಗ)<br>6. ಮೂರು ತಿಂಗಳ ಸರ್ಟಿಫಿಕೆಟ್ ಕಾರ್ಯಕ್ರಮ(ಯೋಗ ವಿಜ್ಞಾನ ಅಧ್ಯಯನ ವಿಭಾಗ) |

**II. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಜಿ.ಆರ್. ಹಳ್ಳಿ ಚಿತ್ರದುರ್ಗ-ಇಲ್ಲಿರುವ ಸ್ನಾತಕೋತ್ತರ ಕಾರ್ಯಕ್ರಮಗಳ ವಿವರ.**
**(ಪ್ರವೇಶಾತಿಗೆ ಪ್ರತ್ಯೇಕವಾಗಿ ನಿಗದಿ ಪಡಿಸಿದ ಅರ್ಜಿ ನಮೂನೆಯಲ್ಲಿ ಸಲ್ಲಿಸತಕ್ಕದ್ದು)**

| ಕ್ರ.ಸಂ. | ನಿಕಾಯ | ವ್ಯಾಸಂಗ ವಿಷಯಗಳು |
|---|---|---|
| 1 | **ಕಲಾ** | **ಎಂ.ಎ:** ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ಮತ್ತು ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ) |
| 2 | **ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ** | **ಎಂ.ಕಾಂ.** |
| 3 | **ವಿಜ್ಞಾನ ಮತ್ತು ತಂತ್ರಜ್ಞಾನ** | **ಎಂ.ಎಸ್ಸಿ:** ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ, ಮತ್ತು ಪ್ರಾಣಿಶಾಸ್ತ್ರ. |

**III. ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಕಾರ್ಯಕ್ರಮಗಳ ವಿವರ.**

| ಕ್ರ. ಸಂ. | ಕಾಲೇಜಿನ ಹೆಸರು | ವ್ಯಾಸಂಗ ವಿಷಯಗಳು |
|---|---|---|
| | **ದಾವಣಗೆರೆ ಜಿಲ್ಲೆ** | |
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | **ಎಂ.ಎ:** ಕನ್ನಡ, ಮತ್ತು ಇಂಗ್ಲೀಷ್.<br>**ಎಂ.ಕಾಂ.**<br>**ಎಂ.ಬಿ.ಎ.** (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ-ಪಿ.ಜಿ.ಸಿ.ಇ.ಟಿ. ಮುಖಾಂತರ) |
| 2 | ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ. | **ಎಂ.ಎ:** ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಸಮಾಜಶಾಸ್ತ್ರ. **ಎಂ.ಕಾಂ.** |
| 3 | ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | **ಎಂ.ಕಾಂ.** |
| 4 | ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | **ಎಂ.ಕಾಂ.** |
| 5 | ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ. | **ಎಂ.ಎ:** ಇಂಗ್ಲೀಷ್, ಮತ್ತು ಅರ್ಥಶಾಸ್ತ್ರ.<br>**ಎಂ.ಕಾಂ.** |
| 6 | ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ, ದಾವಣಗೆರೆ | **ಎಂ.ಬಿ.ಎ.**<br>(ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ-ಪಿ.ಜಿ.ಸಿ.ಇ.ಟಿ. ಮುಖಾಂತರ) |
| 7 | ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ. | **ಎಂ.ಕಾಂ.** |
| 8 | ಎಸ್.ಜೆ.ವಿ.ಪಿ. ಕಾಲೇಜು, ಹರಿಹರ. | **ಎಂ.ಕಾಂ.** |
| 9 | ಆರ್. ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ದಾವಣಗೆರೆ. | **ಎಂ.ಕಾಂ.** |
| 10 | ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ | **ಎಂ.ಇಡಿ.** |
| | **ಚಿತ್ರದುರ್ಗ ಜಿಲ್ಲೆ** | |
| 11 | ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ. | **ಎಂ.ಎ:** ಕನ್ನಡ, ಇಂಗ್ಲೀಷ್. ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮತ್ತು ಸಮಾಜಶಾಸ್ತ್ರ.<br>**ಎಂ.ಕಾಂ.** |
| 12 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ. | **ಎಂ.ಎಸ್ಸಿ:** ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಮತ್ತು ಭೌತಶಾಸ್ತ್ರ |
| 13 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ. | **ಎಂ.ಎ:** ಕನ್ನಡ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ.<br>**ಎಂ.ಕಾಂ.** |
| 14 | ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | **ಎಂ.ಎ:** ಕನ್ನಡ, ಮತ್ತು ಸಮಾಜಶಾಸ್ತ್ರ.<br>**ಎಂ.ಕಾಂ.** |
| 15 | ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | **ಎಂ.ಎ:** ಇಂಗ್ಲೀಷ್. |

## ಅರ್ಜಿ ಶುಲ್ಕದ ವಿವರ

| ಕ್ರ. ಸಂ. | ಶುಲ್ಕ ವಿವರಗಳು | ಸಾಮಾನ್ಯ/ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಪ.ಜಾ/ಪ.ಪಂ/ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ | ಪಾವತಿಸುವ ವಿಧಾನ |
|---|---|---|---|---|
| 1 | ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | ರೂ.1000/- | ರೂ.500/- | ಶುಲ್ಕ ಪಾವತಿಯನ್ನು ಚಲನ್ ಮೂಲಕ (ಆಫ್‌ಲೈನ್) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ: **40619101261** (IFSC Code:SBIN0040869) ಶಾಖೆಗೆ ಸಂದಾಯವಾಗುವಂತೆ ಪಾವತಿಸಬಹುದು ಅಥವಾ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ – ಇವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸುವುದು. |
| 2 | ಹೆಚ್ಚುವರಿ ಕಾರ್ಯಕ್ರಮಗಳಿಗಾಗಿ | ರೂ.1000/- | ರೂ.500/- | |

**ಸೂಚನೆ:** ದಿನಾಂಕ: 04.07.2025ರ **ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್.ಹಳ್ಳಿ, ಚಿತ್ರದುರ್ಗದಲ್ಲಿನ ಪದವಿಗಳ ಪ್ರವೇಶಾತಿಗೆ ಪ್ರತ್ಯೇಕವಾಗಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು**

**ಅರ್ಜಿಸಲ್ಲಿಸುವ ವಿಧಾನ:** ಅರ್ಹ ಅಭ್ಯರ್ಥಿಗಳು (i) ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ ಮತ್ತು ಸಂಯೋಜಿತ ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ (ii) ಸ್ನಾತಕೋತ್ತರ ಕೇಂದ್ರ ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿನ ಪದವಿ ಕೋರ್ಸ್‌ಗಳಿಗೆ, ವಿಶ್ವವಿದ್ಯಾನಿಲಯದ ವೆಬ್‌ಸೈಟ್:www.davangereuniversity.ac.in ಮೂಲಕ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಪ್ರತ್ಯೇಕವಾಗಿ ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ: 15.07.2025 ರಿಂದ ದಿನಾಂಕ:25.08.2025 (ಕೆಲಸದ ದಿನಗಳಲ್ಲಿ ಕಛೇರಿಯ ಅವಧಿ ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30)ರೊಳಗಾಗಿ ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ** – ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

**ಮುಖ್ಯ ಸೂಚನೆ:** ಸ್ನಾತಕೋತ್ತರ ಪದವಿ, ಪಿ.ಜಿ. ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕಾರ್ಯಕ್ರಮಗಳ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಪ್ರವೇಶಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in) ನಲ್ಲಿ ಪಡೆಯಬಹುದಾಗಿದೆ. ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ನಿಯಮಿತವಾಗಿ ಸಂಪರ್ಕಿಸಬಹುದಾಗಿದೆ. **ಈ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ.**

## IV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:

1. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ.
2. ಪದವಿ ಅಂಕಪಟ್ಟಿಗಳು (ಎಲ್ಲಾ 03 ವರ್ಷಗಳ/06 ಸೆಮಿಸ್ಟರ್‌ಗಳ ಪ್ರತಿಗಳು)
3. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿಗಳು.
4. ಆಧಾರ್ ಕಾರ್ಡ್ ಪ್ರತಿ.
5. ಮೀಸಲಾತಿ/ದಿವ್ಯಾಂಗ/ಕ್ರೀಡಾ/ರಾ.ಸೆ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಭಿತರು/ಕಲ್ಯಾಣ ಕರ್ನಾಟಕ-371(ಜೆ)/ಕನ್ನಡ ಮಾಧ್ಯಮ/ಹುತಾತ್ಮ ರೈತರ ಮಕ್ಕಳು ಇತ್ಯಾದಿ, ಕುರಿತು ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

## V. ಪ್ರವೇಶ ಪರೀಕ್ಷೆ ವೇಳಾಪಟ್ಟಿ ಹಾಗೂ ಸಂದರ್ಶನ ಪ್ರಕ್ರಿಯೆಯ ವಿವರಗಳು

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ಅರ್ಜಿ ವಿತರಣೆ ಹಾಗೂ ಸಲ್ಲಿಸಲು ಪ್ರಾರಂಭದ ದಿನಾಂಕ | 15.07.2025 |
| 2 | ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 25.08.2025 |
| 3 | ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ವಿಭಾಗವಾರು ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in)ನಲ್ಲಿ ಅಪ್‌ಲೋಡ್ ಮಾಡಲಾಗುವುದು) | 28.08.2025 ರಿಂದ 30.08.2025 ರವರೆಗೆ |
| 4 | ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ | 01.09.2025 |
| **ಕೇಂದ್ರಿಕೃತ ಸಂದರ್ಶನ, ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಮತ್ತು ತರಗತಿಗಳ ಪ್ರಾರಂಭ:** | | |
| 5 | ಮೊದಲನೆಯ ಸುತ್ತಿನ ಮೆರಿಟ್ ಸೀಟುಗಳು ಮತ್ತು ಸ್ಪೆಷಲ್ ಕ್ಯಾಟಗರಿ ಸೀಟುಗಳು ಹಾಗೂ Enhanced Fees Structure (EFS) ಸೀಟುಗಳು | 02.09.2025 ಮತ್ತು 03.09.2025 |
| | ಎರಡನೆಯ ಸುತ್ತಿನ ಪ್ರವೇಶಾತಿ | 04.09.2025 ಮತ್ತು 06.09.2025 |
| | ಮೂರನೆಯ ಸುತ್ತಿನ ಪ್ರವೇಶಾತಿ | 08.09.2025 |
| 6 | ತರಗತಿಗಳ ಪ್ರಾರಂಭ | 09.09.2025 |

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

## VI. ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:

1. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿನ ಸ್ನಾತಕೋತ್ತರ ಕೋರ್ಸ್‌ಗಳಿಗೆ ಮಾತ್ರ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಪ್ರತ್ಯೇಕವಾಗಿ ನಿಗದಿಪಡಿಸಿರುವ ಅರ್ಜಿ ನಮೂನೆಯಲ್ಲಿಯೇ ಸಲ್ಲಿಸತಕ್ಕದ್ದು.
2. ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ವರ್ಷಕ್ಕೆ, ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ಲಭ್ಯವಿರುವ ಕೋರ್ಸ್‌ಗಳಿಗೆ (2024–25ನೇ ಸಾಲಿನ ಶುಲ್ಕವನ್ನು ಮುಂದುವರೆಸಲಾಗಿದೆ) ಪ್ರವೇಶ ಶುಲ್ಕವು ದಾವಣಗೆರೆಯ ಶಿವಗಂಗೋತ್ರಿ ಕ್ಯಾಂಪಸ್‌ಗಿಂತ ಸುಮಾರು ಶೇ.10 ರಷ್ಟು ಕಡಿಮೆ ಇರುತ್ತದೆ.
3. ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿಗಳಿಗೆ (ವಿಶ್ವವಿದ್ಯಾನಿಲಯ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ/ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ/ಘಟಕ ಕಾಲೇಜು/ಸ್ವಾಯತ್ತ ಕಾಲೇಜು/ಸಂಲಗ್ನಗೊಂಡ ಕಾಲೇಜುಗಳು) ಪ್ರವೇಶಾತಿ ಬಯಸುವ ಅರ್ಹ ಅಭ್ಯರ್ಥಿಗಳು **'ವಿಷಯವಾರು ಪ್ರತ್ಯೇಕ'** ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ್ರತಿ ಕೋರ್ಸಿಗೂ ಪ್ರತ್ಯೇಕ ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು.
4. **ಸ್ನಾತಕ ಪದವಿಯ ಅಂತಿಮ ವರ್ಷದ ಫಲಿತಾಂಶದ ನಿರೀಕ್ಷೆಯಲ್ಲಿರುವ ದಾವಣಗೆರೆ ವಿಶ್ವವಿದ್ಯಾನಿಲಯ ಅಥವಾ ಇತರೆ ವಿಶ್ವವಿದ್ಯಾನಿಲಯಗಳ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಹಾಗೂ ಪ್ರವೇಶ ಪರೀಕ್ಷೆಯನ್ನು ಬರೆಯಲು ಅರ್ಹರಾಗಿರುತ್ತಾರೆ.**
5. ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ, ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

6. ಪ್ರವೇಶಾತಿಯ ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶವನ್ನು ನೀಡಲಾಗುವುದಿಲ್ಲ. ಈಗಾಗಲೇ ಪ್ರವೇಶಾತಿಯನ್ನು ಪಡೆದಿದ್ದರೆ ಅಂತಹ ಪ್ರವೇಶಾತಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು, ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸದ ನಂತರ ಗೊತ್ತಾದಲ್ಲಿ ಸಹ ಅಂತಹ ಅಭ್ಯರ್ಥಿಗಳ ಪದವಿಯನ್ನು ಹಿಂಪಡೆಯಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ರಿತ್ಯಾ ಕ್ರಮಕೈಗೊಳ್ಳಲಾಗುವುದು.
7. ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಯಾವುದೇ ನಿರ್ದಿಷ್ಟ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 15ಕ್ಕಿಂತ ಕಡಿಮೆಯಿದ್ದರೆ, ಅಭ್ಯರ್ಥಿಗಳನ್ನು ಶಿವಗಂಗೋತ್ರಿಯ ಮುಖ್ಯ ಕ್ಯಾಂಪಸ್ ಅಥವಾ ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರಕ್ಕೆ (ಅದೇ ಕಾರ್ಯಕ್ರಮ ಅಥವಾ ಸಂಬಂಧಿತ ಕಾರ್ಯಕ್ರಮಕ್ಕೆ) ವರ್ಗಾಯಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.
8. ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರಿಭರಿಕೆ ಮಾಡಲಾಗುವುದಿಲ್ಲ.
9. **ಭರ್ತಿ ಮಾಡಿದ ಪ್ರವೇಶಾತಿ ಅರ್ಜಿಯ ಮೂಲ ಪ್ರತಿ ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಆಯಾ ವಿಭಾಗದ ಕಛೇರಿಗೆ ವೈಯಕ್ತಿಕವಾಗಿ ಸಲ್ಲಿಸುವುದು ಅಥವಾ ಆಯಾ ವಿಭಾಗಕ್ಕೆ ಅಂಚೆ ಮೂಲಕ ಕಳುಹಿಸುವುದು.**
10. ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಗಳ ಕಛೇರಿಗೆ ಸಲ್ಲಿಸಿದ ನಂತರ ಪ್ರವೇಶ ಪರೀಕ್ಷೆಯ, ಪ್ರವೇಶ ಪತ್ರವನ್ನು (Hall Ticket) ತಪ್ಪದೇ ಪಡೆಯತಕ್ಕದ್ದು.
11. ಅಂಚೆ ಮೂಲಕ ಅರ್ಜಿಗಳನ್ನು ಕಳುಹಿಸಿದ ಅಭ್ಯರ್ಥಿಗಳು ತಮ್ಮ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದ ಕಛೇರಿಯಲ್ಲಿ ವೈಯಕ್ತಿಕವಾಗಿ ಪ್ರವೇಶ ಪರೀಕ್ಷೆಯ ಒಂದು ದಿನ ಮುಂಚಿತವಾಗಿ ಪಡೆಯಬಹುದಾಗಿದೆ.
12. ಪ್ರವೇಶ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ದಾವಣಗೆರೆಯಲ್ಲಿ ನಡೆಸಲಾಗುವುದು.
13. ಪ್ರವೇಶ ಪರೀಕ್ಷೆಯ ನಂತರ, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಸ್ನಾತಕ ಪದವಿಯಲ್ಲಿ ಗಳಿಸಿದ ಅಂಕಗಳು (50:50) ಆಧಾರದ ಮೇಲೆ ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ, ಚಿತ್ರದುರ್ಗ ಮತ್ತು ಶಿವಗಂಗೋತ್ರಿ ಕ್ಯಾಂಪಸ್‌ಗೆ (ಸಂಯೋಜಿತ ಕಾಲೇಜುಗಳೊಗೊಂಡು) ಎರಡು ಪ್ರತ್ಯೇಕ ಮೆರಿಟ್ ಪಟ್ಟಿಗಳನ್ನು ಸಿದ್ದಪಡಿಸಲಾಗುವುದು.
14. ಮೇರಿಟ್ ಹಾಗೂ Enhanced Fees Structure (EFS) ಸೀಟುಗಳ ಶುಲ್ಕ ತಃಖ್ತೆಯನ್ನು ಅನುಬಂಧ-01ರಲ್ಲಿ ಸೂಚಿಸಲಾಗಿದೆ. (ಸದರಿ ಶುಲ್ಕ ತಃಖ್ತೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.)
15. ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ತರಗತಿಗಳು ಪ್ರಾರಂಭವಾಗಲಿವೆ.

**"ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಗೆ ಭೇಟಿ ನೀಡತಕ್ಕದ್ದು."**

* * *